# ಸಂಕಲನ ಗೀತೆ

ಒಂದಕೆ ಒಂದನು ಕೂಡಿಸಲು
ಬಂದಿತು ಉತ್ತರ ಎರಡು,
ಹಸುವಿನ ಕೋಡು ಎರಡು/

ಒಂದಕೆ ಎರಡನು ಕೂಡಿಸಲು
ಬಂದಿತು ಉತ್ತರ ಮೂರು,
ಕಾಲಗಳೂ ಸಹ ಮೂರು/

ಒಂದಕೆ ಮೂರನು ಕೂಡಿಸಲು
ಬಂದಿತು ಉತ್ತರ ನಾಲ್ಕು,
ಮಂಚಕೆ ಕಾಲು ನಾಲ್ಕು/

ಒಂದಕೆ ನಾಲ್ಕನು ಕೂಡಿಸಲು
ಬಂದಿತು ಉತ್ತರ ಐದು,
ಹಸ್ತದಿ ಬೆರಳು ಐದು/

ಒಂದಕೆ ಐದನು ಕೂಡಿಸಲು
ಬಂದಿತು ಉತ್ತರ ಆರು,
ವರ್ಷಕ್ಕೆ ಋತುಗಳು ಆರು/

ಒಂದಕೆ ಆರನು ಕೂಡಿಸಲು
ಬಂದಿತು ಉತ್ತರ ಏಳು,
ಬಣ್ಣಗಳೂ ಸಹ ಏಳು/

ಒಂದಕೆ ಏಳನು ಕೂಡಿಸಲು
ಬಂದಿತು ಉತ್ತರ ಎಂಟು,
ದಿಕ್ಕಗಳೂ ಸಹ ಎಂಟು/

ಒಂದಕೆ ಎಂಟನು ಕೂಡಿಸಲು
ಉತ್ತರ ಬಂತು ಒಂಬತ್ತು
ಗ್ರಹಗಳು ಕೂಡ ಒಂಬತ್ತು/

ಒಂದಕೆ ಒಂಬತ್ತು ಕೂಡಿಸಲು
ಬಂದಿತು ಉತ್ತರ ಹತ್ತು,
ರಾವಣನಿಗೆ ತಲೆ ಹತ್ತು/

**- ಅಮೃತೇಶ್ ತಂಡರ,**
**ಅಣ್ಣಿಗೇರಿ**



# ನರಿಯ ಉಪಾಯ

ಒಮ್ಮೆ ಗುಡುಗು, ಮಿಂಚು ಸಹಿತ ಜೋರಾಗಿ ಮಳೆ ಸುರಿಯಲಾರಂಭಿಸಿತು. ಇದರಿಂದಾಗಿ ಹಳ್ಳಕೊಳ್ಳಗಳು, ಕಾಲುವೆಗಳು ಎಲ್ಲಾ ತುಂಬಿ ಹರಿದು ನದಿ ಸೇರುತ್ತಿದ್ದಂತೆಯೇ ಪ್ರವಾಹ ಉಂಟಾಯಿತು. ರಭಸದಿಂದ ಹರಿಯುತ್ತಿದ್ದ ದೊಡ್ಡ ಕಾಲುವೆಯೊಂದರಲ್ಲಿ ನರಿಯೊಂದು ಸಿಕ್ಕಿಹಾಕಿಕೊಂಡಿತು. ಹರಸಾಹಸಪಟ್ಟರೂ ಆ ನರಿಗೆ ಕಾಲುವೆಯಿಂದ ಪಾರಾಗಿ ಬರಲು ಸಾಧ್ಯವಾಗದೇ ತೇಲುತ್ತ ಸಾಗಿತ್ತು. ಹಾಗೆ ಅದು ಸಾಗುತ್ತಿರುವಾಗ ಹಳ್ಳಿಯ ಜನರು ಕಾಲುವೆಯ ಪಕ್ಕ ನಡೆದುಕೊಂಡು ಹೋಗುತ್ತಿರುವುದು ಕಾಣಿಸಿತು.

ನರಿ ಅವರನ್ನು ಕುರಿತು 'ಈಗ ಜಗತ್ತಿನಲ್ಲಿ ಪ್ರಳಯವಾಗುತ್ತದೆ ಜೋಕೆ' ಎಂದು ಹೇಳಿತು. ಆ ಹಳ್ಳಿಯ ಜನರು ಮುಗ್ಧರು. ಅವರು ನರಿ ಹೇಳಿದ್ದನ್ನು ಕೇಳಿ ಹೆದರಿಕೆಯಿಂದ 'ಪ್ರಳಯ ಎಂದರೇನು? ಅದು ಯಾವಾಗ ಸಂಭವಿಸುತ್ತದೆ? ಅದರಿಂದ ಪಾರಾಗುವುದು ಹೇಗೆ?' ಎಂದೆಲ್ಲಾ ಪ್ರಶ್ನಿಸಿದರು.

ನರಿಯು 'ಮೊದಲು ನನ್ನನ್ನು ಈ ಪ್ರವಾಹದಿಂದ ಪಾರು ಮಾಡಿ. ಆನಂತರ ನಿಮ್ಮೆಲ್ಲ ಪ್ರಶ್ನೆಗಳಿಗೆ ಉತ್ತರಿಸುತ್ತೇನೆ' ಎಂದಿತು. ಆಗ ಆ ಹಳ್ಳಿಯ ಕೆಲವು ಧೈರ್ಯವಂತ ಜನರು ಸಾಹಸದಿಂದ ನರಿಯನ್ನು ಆ ಕಾಲುವೆಯಿಂದ ಪಾರು ಮಾಡಿ ದಡಕ್ಕೆ ತಂದು ಬಿಟ್ಟರು. ಹಳ್ಳಿಯ ಜನರು ನರಿಯನ್ನು ಕುರಿತು 'ಈಗ ಹೇಳು! ಪ್ರಳಯ ಎಂದರೇನು? ಅದು ಎಂದಾಗುತ್ತದೆ?' ಎಂದು ಪ್ರಶ್ನಿಸಿದರು.

ನರಿ 'ಹೆದರಬೇಡಿ! ಸದ್ಯಕ್ಕೆ ಪ್ರಳಯವಾಗುವುದಿಲ್ಲ' ಎನ್ನುತ್ತ ಯಾರ ಕೈಗೂ ಸಿಗದೆ ಓಡಿ ಹೋಯಿತು.

**-ಎಂ. ಕೆ. ಮಂಜುನಾಥ್, ಬೆಂಗಳೂರು**

